## 33. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಶಾಂತಿನಗರ



ಒಂದು ಸುಂದರ ಇಂಗ್ಲೀಷ್ ಅನುಕೂಲಿಸುವ ಕೊಠಡಿ, ಹಾಗೂ ಪರಿಣಾಮಕಾರಿ ಕಲಿಕೆ ನಮ್ಮ ಕನಸಾಗಿತ್ತು ಇದನ್ನು ಸಾದ್ಯವಾಗಿಸಲು ಹಲವಾರು ಜನರು ನಮಗೆ ಸಹಕಾರ ನೀಡಿದ್ದಾರೆ ಅವರೆಲ್ಲರಿಗೂ ನಮ್ಮ ಮನಃಪೂರ್ವಕ ಧನ್ಯವಾಧಗಳನ್ನು ಅರ್ಪಿಸಲು ಬಯಸುತ್ತೇವೆ

ನಮಗೆ ಮಾರ್ಗದರ್ಶನ ಮಾಡಿದ ನಮ್ಮ ಇಲಾಖೆಯ ಅಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ), ಶಿವಮೊಗ್ಗ. ಶ್ರೀ ಮಂಜುನಾಥ ಸರ್, ಉಪನಿರ್ದೇಶಕರು (ಅಭಿವೃದ್ದಿ), ಶಿವಮೊಗ್ಗ, ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ಮೇಡಂ, ನಮ್ಮ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಲೋಕೇಶ್ ಸರ್, ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಚೋಪ್ದಾರ್ ಸರ್, ಅವರಿಗೆ ಹೃದಯ ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ

### ಶಾಲಾ ಇತಿಹಾಸ ಹಾಗೂ ಪರಿಚಯ

ಶಿವಮೊಗ್ಗ ನಗರದ ಹೊರವಲಯದ ರಾಗಿಗುಡ್ಡ ಎಂಬ ಸುಂದರ, ಪ್ರೇಕ್ಷಣೀಯ ಸ್ಥಳದ ಬುಡದಲ್ಲಿ ಇರುವುದೇ ಶಾಂತಿನಗರ ಬಡಾವಣೆ ಇಲ್ಲಿ ಅತೀ ಹಿಂದುಳಿದ, ಬಡ ಹಾಗೂ ಅಲ್ಪಸಂಖ್ಯಾತ ಸಮುದಾಯವೇ ಅತೀ ಹೆಚ್ಚಾಗಿದೆ. ಇಲ್ಲಿ 1960ರಲ್ಲಿ ಸ್ಥಾಪನೆಯಾಗಿ ಶಿವಮೊಗ್ಗ ನಗರದ ಉತ್ತಮವಾದ ಮಕ್ಕಳ ಸಂಖ್ಯೆಯೊಂದಿಗೆ ಉತ್ತಮವಾಗಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತ, ಬಡಾವಣೆಯ ಮಕ್ಕಳ ಉತ್ತಮ ಶಿಕ್ಷಣಕ್ಕೆ ಆಧಾರವಾಗಿ ನಡೆದು ಬರುತ್ತಿದೆ .

ಶಾಲೆಯು 6 ಬೋಧನಾ ಕೊಠಡಿಗಳನ್ನು ಹೊಂದಿದೆ ಹಾಗೂ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ವಿಶೇಷ ಮಕ್ಕಳ ಶೌಚಾಲಯಗಳನ್ನು ಒಳಗೊಂಡಿದೆ. ಶಾಲೆಯು ಸಂಪೂರ್ಣ ಕಾಂಪೌಂಡ್ ವ್ಯವಸ್ಥೆಯನ್ನು ಹೊಂದಿದೆ, ಪ್ರಸ್ತುತ ಶಾಲೆಯಲ್ಲಿ ಓರ್ವ ಬಡ್ತಿ ಮುಖ್ಯಶಿಕ್ಷಕರು ಹಾಗೂ 5 ಜನ ಸಹಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳು ಪಠ್ಯ ಕಲಿಯೆಯಲ್ಲಿ ಮಾತ್ರವಲ್ಲದೇ ಪೂರಕವಾದ ಸಹಪಠ್ಯ ಕಲಿಕೆಯಲ್ಲೂ ಉತ್ತಮ ಸಾಧನೆ ಮಾಡಿದೆ. ಪ್ರತಿಭಾ ಕಾರಂಜಿ ಹಾಗೂ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆದಿರುತ್ತಾರೆ.

ಶಾಲೆಯಲ್ಲಿ ಹಲವಾರು ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಇಂಗ್ಲೀಷ್ ಫೆಸ್ಟ್, ಅಗಸ್ತ್ಯ ಫೌಂಡೇಶನ್ ವತಿಯಿಂದ ನಿರಂತರವಾಗಿ ವಿಜ್ಞಾನ ಪ್ರಾಯೋಗಿಕ ತರಗತಿಗಳನ್ನು ನಡೆಸಲಾಗುತ್ತಿದೆ. ಇಂಗ್ಲೀಷ್, ವಿಜ್ಞಾನ ಹಾಗೂ ಉತ್ತಮ ನಲಿ ಕಲಿ ಕೊಠಡಿಗಳನ್ನು ರೂಪಿಸಲಾಗಿದೆ.

### ಚಟುವಟಿಕೆಯಾಧಾರಿತ ಇಂಗ್ಲೀಷ್ ಕಲಿಕೆಯೆಡೆಗೆ ಒಂದು ಹೆಜ್ಜೆ .........

ಶಾಲೆಯ ಮಕ್ಕಳಿಗೆ ಪರಿಣಾಮಕಾರಿಯಾಗಿ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಕಲಿಸುವುದು ನಮ್ಮ ಕರ್ತವ್ಯವಾಗಿದೆ. ನಾವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ (ಡಯಟ್) ಇಲ್ಲಿ 30 ದಿನಗಳ ELEP ಇಂಗ್ಲೀಷ್ ತರಬೇತಿಯನ್ನು ಪಡೆದ ನಂತರ ಆ ತರಬೇತಿಯು ನಮ್ಮಲ್ಲಿ ಬಹಳಷ್ಟು ಬದಲಾವಣೆಗೆ ಕಾರಣವಾಯಿತು. ನಮಗೆ ನಮ್ಮ ತರಗತಿಗಳನ್ನು ವಿನೂತನವಾಗಿ ಸಜ್ಜುಗೊಳಿಸಲು ಹಾಗೂ ಚಟುವಟಿಕೆಯಾಧಾರಿತವಾಗಿ

ನಮ್ಮ ತರಗತಿ ನಡೆಸಲು, ಪರಿಣಾಮಕಾರಿ ಕಲಿಕಾ ವಾತಾವರಣ ಕಲ್ಪಿಸಲು, ಮಕ್ಕಳಿಗೆ ಇಂಗ್ಲೀಷ್ ಭಾಷೆಯ ಕಡೆ ಸೆಳೆಯಲು ಅವರು ಕಲಿಕೆಯಲ್ಲಿ ಆಸಕ್ತಿ ಹೊಂದುವಂತೆ ಮಾಡಲು ಇದು ಉತ್ತಮ ಮಾರ್ಗದರ್ಶನ ನೀಡಿತು.

ಈ ತರಬೇತಿಯು ನಮ್ಮ ತರಗತಿ ಮಕ್ಕಳಲ್ಲಿ ಇಂಗ್ಲೀಷ್ ಕಲಿಕೆಯಲ್ಲಿ ಆಸಕ್ತಿ ಬೆಳೆಸಲು ಇದು ಬಹಳ ಸಹಕಾರಿಯಾಯಿತು ಇದರ ಭಾಗವಾಗಿ ನಮ್ಮ ಶಾಲೆಯಲ್ಲಿ "ಇಂಗ್ಲೀಷ್ ಫೆಸ್ಟ್"ನ್ನು ಕೂಡ ಹಮ್ಮಿಕೊಂಡಿದ್ದು ಅದು ಯಶಸ್ವಿಯಾಗಿ ನಡೆಸಲಾಗಿದೆ ನಮ್ಮ ತರಗತಿಯ ಪ್ರಯೋಗ ಹಾಗೂ ಕಲಿಕಾ ಯಶಸ್ಸನ್ನು ಈ ಮೂಲಕ ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇವೆ.

### ನಮ್ಮ ಇಂಗ್ಲೀಷ್ ಕೊಠಡಿ ............

" ಮಕ್ಕಳು ಹೇಗೆ ಯೋಚಿಸಬೇಕೆ ಎಂಬುದನ್ನು ಕಲಿಯಬೇಕು, ಏನನ್ನು ಯೋಚಿಸಬೇಕು ಎಂಬುದನ್ನಲ್ಲ " ಮಾರ್ಗರೇಟ್ ಮೇಡ್ ನಾವು ಯೋಚಿಸಿದಂತೆ ಪ್ರತಿಯೊಂದು ಮಗುವಿನ ಮನಸ್ಸನ್ನು ಕಲಿಕೆಯೆಡೆಗೆ ಪರಿಣಾಮಕಾರಿಯಾಗಿ ಸೆಳೆಯುವುದು ಹಾಗೂ ಆ ಮೂಲಕ ಅವರಲ್ಲಿ ಪರಿಣಾಮಕಾರಿಯಾಗಿ ಅಗತ್ಯ ಕಲಿಕೆ ಉಂಟುಮಾಡುವುದು ಹಾಗೂ ಭಾ□ಷಾ ಕೌಶಲ್ಯಗಳನ್ನು ಮೂಡಿಸುವುದು ಪ್ರತಿಯೊಬ್ಬ ಶಿಕ್ಷಕರಿಗೂ ತುಂಬಾ ಸವಾಲಿನ ಕೆಲಸವಾಗಿದೆ

ಆದಾಗ್ಯೂ ಕೂಡ ನಾವು ನಮ್ಮ ಶಕ್ತ್ಯಾನುಸಾರ ನಮ್ಮ ತರಗತಿಯನ್ನು ಜೀವಂತ ತರಗತಿಯಾಗಿಸಲು, ಮಕ್ಕಳಿಗೆ ಚಟುವಟಿಕೆಯಾದಾರಿತ ಕಲಿಕಾ ಅನುಭವಗಳನ್ನು ನೀಡಲು, ನಮ್ಮ ಗುರಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಉತ್ತಮ ತರಗತಿ ಅನುಭವಗಳನ್ನು ಮಕ್ಕಳಿಗೆ ನೀಡಲು ಇಂದು ಸವಾಲನ್ನು ನಮಗೆ ನಾವೇ ಹಾಕಿಕೊಂಡೆವು.

" ಕಲಿಕಾ ಸಾಮಗ್ರಿಗಳೊಂದಿಗೆ ನಲಿಯುತ್ತಾ ಇಂಗ್ಲೀಷ್ ಕಲಿಯುತ್ತಿರುವ ಮಕ್ಕಳು "











ತರಗತಿಯ ವಾತಾವರಣ ಆಸಕ್ತಿಕರವಾದ ಕಲಿಕಾ ಸಾಮಗ್ರಿಗಳಿಂದ ಸಜ್ಜುಗೊಂಡು ಮಕ್ಕಳಿಗೆ ಆಟಗಳ ಮೂಲಕ, ಚಟುವಟಿಕೆಗಳ ಮೂಲಕ ಕೂಡಿದ್ದಾಗ ಮಕ್ಕಳ ಮನಸ್ಸನ್ನು ಸೆಳೆಯಲು, ಅವರ ಮನಸ್ಸನ್ನು ಕಲಿಕೆಗೆ ಪ್ರೇರೇಪಿಸಲು ಕಲಿಕೆ

ಮನಸ್ಸಿನಲ್ಲಿ ದೃಢಗೊಳ್ಳಲು ಸಾಧ್ಯವಾಗುತ್ತದೆ ಆ ಮೂಲಕ ನಾವು ಮಕ್ಕಳಿಗೆ ಯೋಚಿಸಲು ಪ್ರೇರೇಪಿಸಲು ಹಾಗೂ ಉತ್ತಮ ಕಲಿಕೆ ಸಾಧ್ಯವಾಗಲು ಸಹಾಯಕವಾಗುತ್ತದೆ ಹಾಗೂ ತರಗತಿ ವಾತಾವರಣ ಸುಂದರವಾಗಿದ್ದು ಅದು ಮಕ್ಕಳ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಇಂತಹ ವಿನೂತನ ವಿಧಾನಗಳು ಹಾಗೂ ಕಲಿಕಾ ಸಾಮಗ್ರಿಗಳ ಬಳಕೆಯೊಂದಿಗೆ ನಮ್ಮ ಜ್ಞಾನದ ಜೊತೆ ಗುಣಾತ್ಮಕ ಬೋಧನೆ ಹಾಗೂ ಕಲಿಕೆ ಸಾಧ್ಯವಾಗಿಸಿದರೆ ಇಂಗ್ಲೀಷ್ ಒಂದೇ ಅಲ್ಲ ಯಾವುದೇ ವಿಷಯಗಳನ್ನಾದರೂ ನಾವು ಪರಿಣಾಮಕಾರಿಯಾಗಿ ಕಲಿಸಬಹುದೆಂಬುದನ್ನು ನಮಗೆ ಈ ಚಟುವಟಿಕೆಗಳು ಮನದಟ್ಟು ಮಾಡಿದವ

" ಕಲಿಕಾ ಸಾಮಗ್ರಿಗಳೇ ಕಲಿಕೆಗೆ ಸುಲಭ ಮೆಟ್ಟಿಲುಗಳು "



" ಕಾರ್ಡ್ ಗಳ ಮೂಲಕ ಕಲಿಕೆ "






" ಭಾಷಾ ಆಟದ ಸಾಮಗ್ರಿಗಳು "






## ಇಂಗ್ಲೀಷ್ ಫೆಸ್ಟ್ ...... .

"ವ್ಯಕ್ತಿಯಲ್ಲಿ ಬುದ್ಧಿವಂತಿಕೆ ಹಾಗೂ ಉತ್ತಮ ವ್ಯಕ್ತಿತ್ವಗಳನ್ನು ಹೊರತರುವುದು ಶಿಕ್ಷಣ ನಿಜವಾದ ಗುರಿಗಳು"

– ಮಾರ್ಟಿನ್ ಲೂಥರ್ ಕಿಂಗ್

ಮಕ್ಕಳು ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಹಾಗೂ ಅವರ ವೈಯಕ್ತಿಕ ಪ್ರತಿಭೆಗಳನ್ನು ಹೊರತರಲು ತರಗತಿ ಬೋಧನೆಯಲ್ಲಿ ಪಾತ್ರಾಭಿನಯ, ಕಿರು ಪ್ರಹಸನಗಳು ಹಾಗೂ ನಾಟಕಗಳ ಬಳಕೆ ಅತ್ಯುತ್ತಮ ಮಾರ್ಗಗಳಾಗಿವೆ. ಇದಕ್ಕೆ ಸಂಬಂದಿಸಿದಂತೆ ಮಕ್ಕಳಿಗೆ ಒಂದು ಉತ್ತಮ ವೇದಿಕೆ ಕಲ್ಪಿಸಲು ನಮ್ಮ ಶಾಲೆಯಲ್ಲಿ ***"ಇಂಗ್ಲೀಷ್ ಫೆಸ್ಟ್"*** ಆಚರಿಸಲಾಯಿತು.

### ಇಂಗ್ಲೀಷ್ ಫೆಸ್ಟ್ ಎಂಬ ಸುಂದರ ವೇದಿಕೆ

ಇಂಗ್ಲೀಷ್ ಫೆಸ್ಟ್ ನ್ನು ನಮ್ಮ ಶಾಲೆಯಲ್ಲಿ ದಿನಾಂಕ 16/02/2019 ರಂದು ಆಚರಿಸಲಾಯಿತು ಮಕ್ಕಳು ಇಂಗ್ಲೀಷ್ ಕಲಿಕೆಗೆ ಸಂಬಂಧಿಸಿದಂತೆ ವಿವಿಧ ಬಗೆಯ ಪಾತ್ರಾಭಿನಯ, ಕಿರು ಪ್ರಹಸನಗಳು, ನಾಟಕಗಳು, ನೃತ್ಯಗಳು, ಇಂಗ್ಲೀಷ್ ಪದ್ಯಗಳ ಗಾಯನ ಹಾಗೂ ಅಭಿನಯ, ಛದ್ಮವೇ□ಷ, ನೀತಿಕಥೆಗಳ ಅಭಿನಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು,






ಸಾಮಾಜಿಕ ಮೌಲ್ಯಗಳಾದ " ಹಿರಿಯರನ್ನು ಗೌರವಿಸುವಿಸುವುದು, ಧೂಮಪಾನ ನಿಷೇಧ ಆರೋಗ್ಯಕರ ಆಹಾರಗಳು, ಪರಿಸರ ಸಂರಕ್ಷಣೆ, ನೀರಿನ ಸಂರಕ್ಷಣೆ, ರಸ್ತೆ ನಿಯಮಗಳ ಪಾಲನೆ ಹಾಗೂ ಸರ್ಕಾರಿ ಶಾಲೆಗಳ ಮಹತ್ವದ" ಮುಂತಾದ ವಿಷಯಗಳ ಕುರಿತು ಮಕ್ಕಳು ಕಾರ್ಯಕ್ರಮಗಳನ್ನು ನೀಡಿದರು. ಇಂಗ್ಲೀಷ್ ಫೆಸ್ಟ್ ನಮ್ಮ ಶಾಲೆಯ ಮಕ್ಕಳಲ್ಲಿ ಉತ್ಸಾಹ ಹುರುಪು ತುಂಬಿದುದು ಅಷ್ಟೆ ಅಲ್ಲ ಅವರು ಬಹಳಷ್ಟು ಕಲಿಯುವಂತೆ ಮಾಡಿತು ಅವರು ಈ ಕಾರ್ಯಕ್ರಮವನ್ನು ಬಹಳಷ್ಟು ಖುಷಿಯಿಂದ ಅನುಭವಿಸಿದರು ಅಷ್ಟೆ ಅಲ್ಲ ನಂತರದ ಅವರ ತರಗತಿಯಲ್ಲಿನ ಉತ್ಸಾಹ ನೂರ್ಮಡಿಯಾಯಿತು.

ಇಂಗ್ಲೀಷ್ ಫೇಸ್ಟ್ ನಲ್ಲಿ ಮಕ್ಕಳ ಪ್ರತಿಭೆ ಅನಾವರಣ

"ಸಂಪನ್ಮೂಲ ಕೊಠಡಿಯನ್ನು





ಅವಲೋಕಿಸುತ್ತಿರುವ ಸಿ ಆರ್ ಪಿ

## ವ್ಯಾಕರಣವನ್ನು ಸರಳವಾಗಿಸಿದ " ಸರಳ ಇಂಗ್ಲೀಷ್ ಗ್ರಾಮರ್ ಬುಕ್ "

ಭಾಷೆ ಬೋಧನೆಯಲ್ಲಿ ಮಕ್ಕಳಿಗೆ ಕಬ್ಬಿಣದ ಕಡಲೆ ಎನ್ನಿಸುವುದು ವ್ಯಾಕರಣ ಅಂಶಗಳು ಅದನ್ನು ಸರಳವಾಗಿ ಕಲಿಸಲು ಶಾಲೆಯ ಮಕ್ಕಳಿಗೆ ಸರಳ ಇಂಗ್ಲೀಷ್ ವ್ಯಾಕರಣ ಪುಸ್ತಕವನ್ನು ತಯಾರಿಸಿದೆ ಅದು 6-8 ತರಗತಿ ಮಕ್ಕಳಿಗೆ ಬಹಳ ಸಹಾಯಕವಾಯಿತು.

ನಮ್ಮ ಶಾಲೆಗೆ ಬರುವ ಪ್ರತಿಯೊಂದು ಮಗುವು ವಿಶಿಷ್ಟ ಮತ್ತು ವಿಭಿನ್ನವಾಗಿರುತ್ತದೆ ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ಪ್ರತಿಭೆ ಇರುತ್ತದೆ ನಾವು ನಮ್ಮ ತರಗತಿಯನ್ನು ಮೇಲೆ ಹೇಳಿದ ವಿವಿಧ ಬಗೆಯ ಚಟುವಟಿಕೆಗಳಿಂದ, ಕಲಿಕಾ ಸಾಮಗ್ರಿಗಳಿಂದ ಶ್ರೀಮಂತಗೊಳಿಸಿದರೆ ಖಂಡಿತವಾಗಿಯೂ ಇಂಗ್ಲೀಷ್ ನ್ನು ಸರಳ ಹಾಗೂ ಸುಲಭವಾಗಿ ಕಲಿಸಬಹುದು

- ❖ ಪ್ರಸ್ತುತ ನಮ್ಮ ಶಾಲೆಯ ಮಕ್ಕಳು ಇಂಗ್ಲೀಷ್ ಕಲಿಕೆಯಲ್ಲಿ ಅತ್ಯುತ್ಸಾಹದಿಂದ ತೊಡಗಿಸಿಕೊಳ್ಳುತ್ತಾರೆ
- ❖ ಇಂಗ್ಲೀಷ್ ಕಲಿಕೆಯಲ್ಲಿ ಭಯ ಮುಕ್ತರಾಗಿ ಪಾಲ್ಗೊಳ್ಳುತ್ತಾರೆ
- ❖ ಮಕ್ಕಳು ಓದುವಿಕೆಯಲ್ಲಿ ಬಹಳಷ್ಟು ಸುಧಾರಣೆ ಕಂಡಿದ್ದಾರೆ
- ❖ ಬರವಣಿಗೆಯು ಬಹಳಷ್ಟು ಸುಧಾರಣೆ ಕಂಡಿದೆ
- ❖ ವೇದಿಕೆಗಳಲ್ಲಿ ಮಕ್ಕಳು ಮುಕ್ತವಾಗಿ ಇಂಗ್ಲೀಷ್ ನಲ್ಲಿ ನಿರೂಪಣೆ ಮುಂತಾದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಾರೆ
- ❖ ಮಾತನಾಡುವ ಕೌಶಲವು ಬಹಳಷ್ಟು ವೃದ್ಧಿಸಿದೆ
- ❖ ತರಗತಿಯ ಚಟುವಟಿಕೆಗಲ್ಲಿ ಪ್ರತಿಯೊಬ್ಬರು ಸಕ್ರಿಯರಾಗಿ ಪಾಲ್ಗೊಳ್ಳುತ್ತಾರೆ

ನಾನು ಇದನ್ನು ಮಾಡಲು ಸಾಧ್ಯವಾಗಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ ಇಲ್ಲಿನ ಪ್ರಾಂಶುಪಾಲರು, ಉಪನ್ಯಾಸಕ ವರ್ಗ, ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೂ, ELEP ತರಬೇತಿ ನೀಡಿದ ತಂಡಕ್ಕೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ನನ್ನಲ್ಲಿ ವಿನೂತನ ಇಂಗ್ಲೀಷ್ ತರಗತಿ ಕೋಣೆಯನ್ನು ರೂಪಿಸಿ ನನ್ನ ಶಾಲೆಯ ಮಕ್ಕಳಲ್ಲಿ ಪರಿಣಾಮಕಾರಿ ಕಲಿಕೆ ಸಾಧ್ಯವಾಗಿಸುವಂತೆ ಮಾಡಲು ಸಹಕರಿಸುತು ಇಂದು ನನ್ನ ಶಾಲೆಯ 1-8 ತರಗತಿಯ ಪ್ರತಿಯೊಂದು ಮಗುವು ಇಂಗ್ಲೀಷ್ ನ್ನು ಪ್ರೀತಿಸುತ್ತದೆ ಹಾಗೂ ಮಾತನಾಡಲು ಪ್ರಯತ್ನಿಸುತ್ತದೆ ಇದೇ ನನಗೆ ಬಹುದೊಡ್ಡ ಬಹುಮಾನವಾಗಿದೆ